**INDIAN JOURNAL OF HISTORY AND ARCHAEOLOGY**
**ISSN (e):2582-225X www.ijha.in**
**Vol-5, Issue -6, November-December, 2023,**
**PageNo,14-24**
**Peer -Reviewed, Refereed Journal**

# ಭೈರವ ಪಾದಪೀಠಗಳು: ಒಂದು ವಿಶ್ಲೇಷಣೆ

## (ಚಿಕ್ಕಮಗಳೂರು ಜಿಲ್ಲೆಯ ಭೈರವ ಪಾದಶಿಲ್ಪಗಳನ್ನು ಅನುಲಕ್ಷಿಸಿ)

***.ಶ್ರೀ ಮಂಜುನಾಥ, ಟಿ.[1]**
****.ಪ್ರೊ.ಸರ್ವಮಂಗಳ. ಜಿ.[2]**

ಶೈವಧರ್ಮವು ಭಾರತದಲ್ಲಿ ಪ್ರಚಲಿತದಲ್ಲಿದ್ದ ಅತ್ಯಂತ ಹಳೆಯ ಮತ್ತು ವಿಸ್ತೃತವಾಗಿ ಹರಡಿಕೊಂಡಿರುವ ಆರಾಧನೆ ಅಥವಾ ಸಂಪ್ರದಾಯಗಳಲ್ಲಿ ಒಂದಾಗಿದೆ. ಈ ಧರ್ಮೀಯರು ಶಿವನ ಆರಾಧಕರಾಗಿದ್ದು ಶಿವನನ್ನು ಅನೇಕ ರೂಪ, ಹೆಸರು, ಗುರುತುಗಳ ಮುಖೇನ ಪೂಜಿಸುತ್ತಾರೆ. ಅವುಗಳೆಂದರೆ ಲಿಂಗು, ನಟರಾಜ, ಅರ್ಧನಾರೀಶ್ವರ, ದಕ್ಷಿಣಾಮೂರ್ತಿ, ಭೈರವ ಮುಂತಾದವುಗಳಾಗಿವೆ. ಶೈವಧರ್ಮವು ಹಲವು ಪಂಗಡಗಳಿದ್ದರೂ, ಅವುಗಳಲ್ಲಿ ಕೆಲವು ಮಾತ್ರ ಇಂದಿಗೂ ಉಳಿದುಕೊಂಡು ಬಂದಿವೆ. ಕಾಶ್ಮೀರಿ ಶೈವ ಸಿದ್ಧಾಂತ, ಪಾಶುಪತ, ನಾಥ ಪಂಥ, ಗುರು ಪಂಥ, ವೀರಶೈವ ಪ್ರಮುಖವಾಗಿದ್ದು, ಪಾಶುಪತ ಸಿದ್ಧಾಂತವು ಅತ್ಯಂತ ಪ್ರಾಚೀನವಾದುದು. ಈ ಪಂಥವು ಎರಡು ಶಾಖೆಗಳನ್ನು ಹೊಂದಿದೆ, ಅವುಗಳೆಂದರೆ ಕಾಪಾಲಿಕರು ಮತ್ತು ಕಾಳಾಮುಖರು.

ಕಾಪಾಲಿಕರನ್ನು ಅತೀಮಾರ್ಗಿಗಳು ಎಂದು ಕರೆಯಲಾಗುತ್ತದೆ. ಇವರು ಶಿವನ ಭಯಾನಕ, ಸಂಹಾರ ರೂಪವಾದ ಭೈರವನನ್ನು ಆರಾಧಿಸುತ್ತಾರೆ. [1] ಕಾಶ್ಮೀರ ಶೈವ ಸಿದ್ಧಾಮತದಲ್ಲಿ ಸಾಧನೆಯ ಫಲವಾಗಿ ಶಿವನಿಗೆ ಸಮಾನವಾದ ಸ್ಥಿತಿಯನ್ನು ಪಡೆದವನನ್ನು 'ಭೈರವ'ನೆಂದು ಕರೆಯುತ್ತಾರೆ.[2] ಇವನ ಹೆಂಡತಿ ಭೈರವಿ[3]. ಭೈರವನನ್ನು ಆವಾಹಿಸುವವರು ಕಾಪಾಲಿಕರು[4]. ಕಪಾಲವನ್ನು ಭಿಕ್ಷಾ ಪಾತ್ರೆಯಾಗಿ ಉಪಯೋಗಿಸುತ್ತಿದ್ದರಿಂದ ಇವರಿಗೆ ಕಾಪಾಲಿಕರೆಂದು ಹೆಸರು ಬಂದಿತು. ಕಾಪಾಲಿನ್ ಎಂಬ ಪದವು ಮೊಟ್ಟ ಮೊದಲು ಯಜ್ಞವಲ್ಕ್ಯ ಸ್ಮೃತಿಯಲ್ಲಿ ಬರುತ್ತದೆ. ಇದರ ಅರ್ಥ ತಲೆಬುರುಡೆ ಹಿಡಿದವನು ಎಂಬುದಾಗಿ, ಒಂದು ಕೈಯಲ್ಲಿ ಬಿಕ್ಷೆಯನ್ನು ಬೇಡುತ್ತಾ,' ಬದುಕುತ್ತಾ ಸಾಗಿಸುವವನು ಕಾಪಾಲಿಕ[5]. ಹಾಲನ 'ಗಾಥಾಸಪ್ತಸತಿ'ಯಲ್ಲಿ ಕಾಪಾಲಿಕರ ಉಲ್ಲೇಖವಿರುವುದನ್ನು ಕಾಣಬಹುದು.[6] ಆನಂಧಗಿರಿಯ ಶಂಕರ ವಿಜಯದಲ್ಲಿ ಉನ್ಮತ್ತ ಭೈರವನು ಕಾಪಾಳಿಕರ ಗುರುವೆಂಧೂ, ಅವನು ಶಂಭು, ಭೈರವ ಮತ್ತು

---

[1].ಸಂಶೋಧನಾವಿದ್ಯಾರ್ಥಿ,ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರವಿಭಾಗ,ಕುವೆಂಪು ವಿಶ್ವವಿದ್ಯಾಲಯ,ಜ್ಞಾನಸಹ್ಯಾದ್ರಿ ಶಂಕರಘಟ್ಟ.
[2] .ಪ್ರಾಧ್ಯಾಪಕರು,,ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ,ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ,ಶಂಕರಘಟ್ಟ

ಕಾಪಾಲೀಶ್ವರ ಸ್ಮಾರಣೆ ಮಾಡುತ್ತಿದ್ದನೆಂದೂ ಹೇಳಿದೆ.[7] ಪ್ರಬೋಧ ಚಂದ್ರೋದಯದ ಅಂಕ–3ರ ಶ್ಲೋಕ 13 ಮತ್ತು 16ರನ್ನು ಎಂ. ಚಿದಾನಂದಮೂರ್ತಿಯವರು ಉಲ್ಲೇಖಿಸಿ 'ಕಾಪಾಲಿಕನು ಮಹಾಭೈರವನ ಆರಾಧಕನಾಗಿದ್ದು, ಅದೇ ತಾನೇ ಕಡಿದ ನರ ಮುಂಡಗಳ ರಕ್ತದಿಂದ ಭೈರವನನ್ನು ತೃಪ್ತಿಪಡಿಸಬೇಕು. ಉಮಾಸಮೇತನಾದ ಶಿವನನು ಆರಾಧಿಸಿ ತತ್ಫಲವಾದ ಪುಣ್ಯದಿಂದ ಕೈಲಾಸವನ್ನು ಸೇರಿ ಅಲ್ಲಿ ಉಮೆಯಷ್ಟೇ ಸುಂದರಿಯಾದ ಸ್ತ್ರೀಯೊಡನೆ ವಿಹರಿಸುವುದು ಇವರ ಗುರಿ' ಎನ್ನುತ್ತಾರೆ. ನರಕಪಾಲ, ಖಟ್ವಾಂಗಗಳು ಇವರ ಪ್ರಮೂಖ ಚಿಹ್ನೆಗಳು.[8] ಕಾಪಾಲಿಕರು ಭೈರವನಂತೆ ಉಗ್ರ ಸ್ವರೂಪದವರಾಗಿದ್ದರು, ಇವರ ಆಚರಣೆಗಳು ವಿಚಿತ್ರವಾಗಿದ್ದು, ಜನರಲ್ಲಿ ಹೆದರಿಕೆ ಹುಟ್ಟಿಸುತ್ತಿದ್ದವು. ಕಾಪಾಲಿಕರು ಕಾಳಾಮುಖರಂತೆ ಒಂದು ಸ್ಥಳದಲ್ಲಿ ನೆಲೆನಿಂತು ಸಮಾಜದೊಡನೆ ಬೆರೆತು ಬದುಕಿದವರಲ್ಲ. ವಿಚಿತ್ರ ಆಚರಣೆಗಳಿಂದ ಜನರು ಭೀತರಾಗಿ ದೊರವೇ ಉಳಿಯುವಂತೆ ಜೀವಿಸಿದರು[9].

ಕಾಪಾಲಿಕರು ವ್ರತಾಚರಣೆಯಿಂದ ಶಿವನನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅದಕ್ಕಾಗಿ ಮಾಟ ಮಂತ್ರ ವಿದ್ಯೆಗಳಲ್ಲಿ ಪರಿಣೀತರಾಗಿದ್ದರು. ಇವರನ್ನು ಮಾಹಾವ್ರತಿಗಳು ಎಂದೂ ಕರೆಯಲಾಗಿದೆ. ಕಾಪಾಲಿಕರ ವ್ರತಾಚರಣೆಯ ಪರಮ ಗುರಿಯೆಂದರೆ ಶಿವನೊಂದಿಗೆ ಆಧ್ಯಾತ್ಮಿಕವಾಗಿ ಅನನ್ಯತೆ, ಐಕ್ಯತೆಯನ್ನು ಸಾಧಿಸುವುದಾಗಿತ್ತು[10]. ಕಾಪಾಳಿಕವು ಸಾಧನೆಯ ಒಂದು ಹಂತದಲ್ಲಿ ತಾನೇ ಶಿವನಾಗುವ ಮಾನವ ದೈವದ ಏಕೀಕರಣ ತತ್ವವನ್ನು ಆಧರಿಸಿತ್ತು[11]. ಬಲಿಕೊಡುವ ಮೂಲಕ ಶಿವನನ್ನು ಒಲಿಸಿಕೊಳ್ಳಲು ಇವರು ಪ್ರಯತ್ನಿಸುತ್ತಿದ್ದರು. ಬಲಿಯು ನರಬಲಿ, ಸ್ವಬಲಿ, ಅಂಗಾಂಗ ಬಲಿ ಹಾಗೂ ಪ್ರಾಣಿ ಬಲಿಗಳಾಗಿದ್ದು ಶಿವನ ಉಗ್ರರೂಪವನ್ನು ತಣಿಸುವುದು ಹಾಗೂ ಒಲಿಸಿಕೊಳ್ಳುವುದು ಆಗಿತ್ತು. ಕಾಪಾಲಿಕರು ತಾನು ಬ್ರಾಹ್ಮಣ ಹತ್ಯೆಯ ಪ್ರಾಯಶ್ಚಿತ್ತಕ್ಕಾಗಿ ಮಹಾವ್ರತವನ್ನು ಆಚರಿಸುತ್ತಿದ್ದರು. ಪ್ರಯಶ್ಚಿತ್ತದ ಆಚರಣೆಯೆಂದರೆ ಬಲಿ ಕೊಡುವುದು. ಇದು ಬಾಹ್ಯತಃ ಮಾನವ ಇಲ್ಲವೇ ಪಶುಬಲಿಯ ಸ್ವರೂಪವನ್ನು ಪಡೆಯುತ್ತದೆ. ಈ ಮತಾಚರಣೆಯ ಗುರಿಯೆಂದರೆ ಕೋಪಿಷ್ಠನೂ, ರಕ್ತಪಿಪಾಸುವೂ ಆದ ದೇವತೆಯನ್ನು ತಣಿಸುವುದು ಹಾಗೂ ಒಲಿಸಿಕೊಳ್ಳುವುದು ಆಗಿತ್ತು[12]

ಭೈರವನ ಸಾಂಕೇತಿಕ ರೂಪವಾಗಿ ಕಲ್ಲಿನ ಪೀಠದ ಮೇಲೆ ಕೆತ್ತಿದ ಪಾದ ಅಥವಾ ಪಾದುಕೆಗಳನ್ನು ಭೈರವನ ಪಾದಗಳೆಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಇವು ಆಯತ ಅಥವಾ ಚೌಕಾಕರವಾಗಿ ಇರುತ್ತವೆ. ಪೀಠದ ಮಧ್ಯಭಾಗದಲ್ಲಿ ಜೋಡಿ ಪಾದ ಅಥವಾ ಪಾದುಕೆಗಳು ಇದ್ದು, ಅವುಗಳ ಸುತ್ತಾ ಹಾವುಗಳು ಸುತ್ತುವರೆದಿರುತ್ತವೆ. ಭೈರವನ ಸಂಕೇತಗಳಲ್ಲಿ ಒಂದಾದ ಚೇಳಿನ ಕೆತ್ತನೆಯು ಪೀಠದ ಮುಂಭಾಗದಲ್ಲಿರುತ್ತದೆ. ಈ ಪೀಠಗಳಲ್ಲಿ ಕಂಡುಬರುವ ಮುಖ್ಯವಾದ ಅಂಶವೆಂದರೆ ಬಲಿಯನ್ನು ಸೂಚಿಸುವ ಮನುಷ್ಯ ಹಾಗೂ ಪ್ರಾಣಿಗಳ ರುಂಡ–ಮುಂಡಗಳು ಬೇರೆ ಬೇರೆಯಾಗಿರುವಂತೆ ಮತ್ತು

ಮನುಷ್ಯನು ತನ್ನನ್ನು ತಾನು ಬಲಿಗೊಡುವಂತೆ ತೋರಿಸಿರುವುದು. ಬಲಿ, ಸ್ವಬಲಿ ಮತ್ತು ಪ್ರಾಣಿಬಲಿಯ ಸಂಕೇತಗಳಾಗಿ ಇವುಗಳನ್ನು ಕಾಣಬಹುದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕ್ಷೇತ್ರಕಾರ್ಯಕೈಗೊಂಡಾಗ ನಮಗೆ ಆಸಕ್ತಿಕರವಾಗಿ ಕಂಡುಬಂದದ್ದು ಈ ಮೇಲಿನ ರೀತಿಯ ಪಾದಪೀಠ ಶಿಲ್ಪಗಳು ಇವುಗಳನ್ನು ವಿದ್ವಾಂಸರು ಭೈರವನ ಪಾದ ಪೀಠಗಳೆಂದು ಗುರುತಿಸಿದ್ದಾರೆ ಹಾಗೂ ಹಿರೇಕೇರೂರು ಗ್ರಾಮದ ಭೈರವನ ಪಾದ ಶಾಸನವು ಈ ರೀತಿಯ ಪಾದ ಪೀಠಗಳನ್ನು ಭೈರವನ ಪಾದ ಪೀಠಗಳೆಂದು ಕರೆದಿದೆ. ಸಾ.ಶ 12ನೇ ಶತಮಾನಕ್ಕೆ ಸೇರಿದ ಈ ಶಾಸನವು "ಕೋಲಬರಸೆಟ್ಟಿ ಯೆಕರಸನು ಶ್ರೀ ಭೈರವ ದೇವರ ಪಾದವನ್ನು ಮಾಡಿದನು" ಎಂದಿದ್ದು ಭೈರವ ಪಾದ ಕಲ್ಲಿನ ಮೇಲೆ ಕೆತ್ತಲಾಗಿದೆ. [13] ಶಾಸನವು ಕನ್ನಡ ಲಿಪಿ ಹಾಗೂ ಭಾಷೆಯಲ್ಲಿದ್ದು ಪಾದಪೀಠಗಳನ್ನು ಭೈರವ ಪಾದಪೀಠಗಳೆಂದು ಕರೆಯಲು ಇದ್ದ ಗೊಂದಲಗಳನ್ನು ನಿವಾರಿಸಿದೆ.

ಚಿಕ್ಕಮಗಳೂರು ಜಿಲ್ಲಾ ಪರಿಸರದ ಚಿಕ್ಕಮಗಳೂರು, ಅಜ್ಜಂಪುರ, ಕಡೂರು, ತರೀಕೆರೆ ತಾಲ್ಲೂಕುಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಭೈರವ ಪಾದಪೀಠಗಳು ಕಂಡುಬಂದಿವೆ. ಇವುಗಳು ಒಂದು ರೀತಿಯಲ್ಲಿರದೇ ವೈವಿಧ್ಯಮಯವಾಗಿ ಭಿನ್ನವಾಗಿವೆ. ಇವು 0.5*0.5 ಅಡಿ ವಿಸ್ತೀರ್ಣದಿಂದ 2*2 ಅಡಿ ವಿಸ್ತೀರ್ಣದಲ್ಲಿ ಕಂಡುಬಂದಿವೆ. ಭೈರವ ಪಾದಪೀಠ ಶಿಲ್ಪಗಳು ಚಿಕ್ಕಮಗಳೂರು ತಾಲ್ಲೂಕಿನ ಕದಿರೆಮಿದಿರೆ, ಉಪ್ಪವಳ್ಳಿ, ಜೋಳದಾಳ್, ಮುಗಳುವಳ್ಳಿ, ಬೆಳವಾಡಿ ಕಡೂರು ತಾಲ್ಲೂಕಿನ ಚೌಳಹಿರಿಯೂರು, ಕಲ್ಕೆರೆ. ಕಲ್ಲಹಳ್ಳಿ, ಮೇಲನಹಳ್ಳಿ, ಸಿಂಗಟಗೆರೆ, ಯಳ್ಳಂಬಳಸೆ, ಚನ್ನಯ್ಯನ ಕೊಪ್ಪಲು, ಅಜ್ಜಂಪುರ ತಾಲ್ಲೂಕಿನ ಕಾರೇಹಳ್ಳಿ, ಹಿರೇಕಾನವಂಗಲ, ಹಣ್ಣೆ, ಹೆಬ್ಬೂರು, ಬುಕ್ಕಾಂಬೂದಿ, ತ್ಯಾಗದಕಟ್ಟೆ, ದಾಸರಹಟ್ಟಿ ಮತ್ತು ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ, ಅಮೃತಾಪುರ, ಇಟ್ಟಿಗೆ, ವಿಠಲಾಪುರ ಮಲ್ಲೇಶ್ವರದಲ್ಲಿ ಕಂಡುಬಂದಿವೆ. ಎಲ್ಲಾ ಪೀಠಗಳು ಶೈವ ದೇವಾಲಯಗಳಲ್ಲಿ ಕಂಡುಬಂದಿವೆ. ಹೆಚ್ಚಾಗಿ ವೀರಭದ್ರ, ಭೈರವೇಶ್ವರ ದೇವಾಲಯಗಳಲ್ಲಿ, ಕೆಲವು ಕಡೆ ಈಶ್ವರ ದೇವಾಲಯದಲ್ಲಿ ಕಂಡುಬಂದಿವೆ. ಕಲ್ಲಹಳ್ಳಿ, ಬುಕ್ಕಾಂಬೂದಿ, ಬೆಳವಾಡಿ ಗ್ರಾಮಗಳ ಭೈರವ ದೇವಾಲಯದಲ್ಲಿ ಭೈರವ ಪೀಠಗಳು ಇವೆ. ಇವುಗಳು ಈ ಭಾಗದಲ್ಲಷ್ಟೇ ಅಲ್ಲದೇ ದಾವಣಗೆರೆ, ಶಿವಮೊಗ್ಗ, ಹಾಸನ, ಮೈಸೂರು ಭಾಗಗಳಲ್ಲಿ ಕಂಡುಬಂದಿವೆ. ಹಾವೇರಿ ಜಿಲ್ಲೆಯಲ್ಲಿ ಭೈರವನ ಪಾದವೆಂದು ಕರೆಯುವ ಐತಿಹಾಸಿಕ ಸ್ಥಳವಿದೆ.

ನಮಗೆ ಕ್ಷೇತ್ರಕಾರ್ಯದಲ್ಲಿ ಸುಮಾರು 23 ಸ್ಥಳಗಳಲ್ಲಿ 25ಕ್ಕೂ ಹೆಚ್ಚು ಭೈರವ ಪಾದ ಪೀಠಗಳು ದೊರಕಿವೆ. ಕೆಲವು ಸಾಮಾನ್ಯವಾಗಿದ್ದರೆ, ಕೆಲವು ಪೀಠ ಕಲಾತ್ಮಕವಾಗಿವೆ. ಎಲ್ಲಾ ಪೀಠಗಳು ಒಂದಕ್ಕೊಂದು ಭಿನ್ನವಾಗಿವೆ ಸಾಮಾನ್ಯವಾಗಿ ಭೈರವ ಪಾದ ಪೀಠವೆಂದರೆ ಪಾದ/ಪಾದುಕೆ, ಸರ್ಪ. ಬಲಿ ಆಥವಾ ಆಹುತಿಯಾದ ಮನುಷ್ಯ ಹಾಗೂ ಪ್ರಾಣಿಗಳು ಇರುತ್ತವೆ. ಪ್ರಸ್ತುತ ಪೀಠಗಳಲ್ಲಿ ಇಬ್ಬರು ವ್ಯಕ್ತಿಗಳು

ಬಲಿಯಾಗಿದ್ದು ರುಂಡ ಮತ್ತು ಮುಂಡಗಳು ಬೇರ್ಪಟ್ಟಿವೆ. ಪಾದಗಳ ಎಡ ಮತ್ತು ಬಲ ಭಾಗಗಳಲ್ಲಿ ಇವರನ್ನು ಬೋರಲಾಗಿ ಹಾಕಿದ್ದು ತಮ್ಮ ಕೈಗಳನ್ನು ಮುಂಚಾಚಿದ್ದಾರೆ. ಇವರು ಪುರುಷರೋ ಅಥವಾ ಮಹಿಳೆಯರೋ ಎಂದು ಗುರುತಿಸಲು ಸಾಧ್ಯವಿಲ್ಲ, ಏಕೆಂದರೆ ಶಿಲ್ಪಗಳು ಶಿಥಿಲವಾಗಿವೆ. ಜೋಳದಾಳಿನ ಪೀಠದಲ್ಲಿ ಬಲಿಯಾಗಿರುವ ಇಬ್ಬರು ಗಂಡಸರಾಗಿದ್ದಾರೆ. ಹಳೇಬೀಡು ವಸ್ತು ಸಂಗ್ರಹಾಲಯದಲ್ಲಿರುವ ಪೀಠದಲ್ಲಿ ಒಬ್ಬ ಪುರುಷ ಹಾಗೂ ಒಬ್ಬ ಮಹಿಳೆ ಬಲಿಯಾಗಿರುವುದು ಕಂಡುಬಂದಿದೆ. ಭೈರವ ಪಾದ ಪೀಠಗಳಲ್ಲಿ ಕೆಲವು ಕಡೆ ಪಾದಗಳು ಕಂಡುಬಂದರೆ, ಕೆಲವು ಕಡೆ ಪಾದುಕೆಗಳು ಕಂಡುಬಂದಿವೆ. ಬುಕ್ಕಾಂಬುಧಿ, ಮೇಲನಹಳ್ಳಿ, ವಿಠಲಾಪುರ ಮಲ್ಲೇಶ್ವರ, ಸಿಂಗಟಗೆರೆ, ದಾಸರಹಟ್ಟಿ ಪೀಠಗಳಲ್ಲಿ ಪಾದಗಳು ಕಂಡುಬಂದರೆ. ಉಳಿದಂತೆ ಅಮೃತಾಪುರ, ಹಣ್ಣೆ, ಇಟ್ಟಿಗೆ, ಚೌಳಹಿರಿಯೂರು, ಲಿಂಗದಹಳ್ಳಿ, ಬೆಳವಾಡಿ ಪೀಠಗಳಲ್ಲಿ ಪಾದುಕೆಗಳು ಕಂಡುಬಂದಿವೆ. ವಿಶೇಷವಾಗಿ ಬುಕ್ಕಾಂಬುದಿ, ಸಿಂಗಟಗೆರೆ, ದಾಸರಹಟ್ಟಿ ಗ್ರಾಮಗಳ ಪೀಠದಲ್ಲಿ ನಾಲ್ಕು (ಎರಡುಜೋಡಿ) ಪಾದಗಳು ಕಂಡುಬರುತ್ತವೆ. ಬುಕ್ಕಾಂಬುದಿ ಗ್ರಾಮದ ಪೀಠದಲ್ಲಿ ಪಾದಗಳಿಗೆ ಗೆಜ್ಜೆ, ಬೆರಳುಗಳಿಗೆ ಕಲುಂಗುರಗಳನ್ನು ತೊಡಿಸಿ ಸಿಂಗರಿಸಲಾಗಿದೆ. ಮತ್ತು ಪೀಠದ ಮುಂಭಾಗದಲ್ಲಿ ಭೈರವನ ಸಂಕೇತವಾದ ಚೇಳಿನ ಕೆತ್ತನೆಯಿದೆ.

ಭೈರವ ಪಾದ ಪೀಠಗಳಲ್ಲಿ ಕಂಡುಬರುವ ಸರ್ಪಗಳ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳಲು ಆಗದು. ಅಮೃತಾಪುರ, ಲಿಂಗದಹಳ್ಳಿ ಮತ್ತು ಇಟ್ಟಿಗೆ ಗ್ರಾಮದ ಪೀಠಗಳಲ್ಲಿ ನಾಲ್ಕು ಸರ್ಪಗಳು ಕಂಡುಬಂದಿದ್ದು, ನಾಲ್ಕು ದಿಕ್ಕಿಗೂ ಮುಖ ಮಾಡಿವೆ. ಹಣ್ಣೆ ಗ್ರಾಮದ ಪೀಠದಲ್ಲಿ ಮೂರು ಸರ್ಪಗಳು ಕಂಡುಬಂದಿದ್ದು, ಒಂದರ ಪಕ್ಕದಲ್ಲಿ ಒಂದರಂತೆ ಇದ್ದು ಮುಂಬಾಗಕ್ಕೆ ಮುಖ ಮಾಡಿವೆ. ಬುಕ್ಕಾಂಬುಧಿ, ಹೆಬ್ಬೂರು, ಚೌಳಹಿರಿಯೂರು ಗ್ರಾಮದ ಪೀಠಗಳಲ್ಲಿ ಎರಡು ಸರ್ಪಗಳು ಕಂಡುಬಂದಿದ್ದು, ಪೀಠದ ಮುಂಭಾಗಕ್ಕೆ ಒಂದು ಪೀಠದ ಹಿಂಭಾಗಕ್ಕೆ ಒಂದು ಮುಖ ಮಾಡಿವೆ. ಕಲ್ಕೆರೆ, ಕಾರೇಹಳ್ಳಿ, ಕಲ್ಲಹಳ್ಳಿ ಗ್ರಾಮದ ಪೀಠಗಳಲ್ಲಿ ಒಂದು ಸರ್ಪ ಕಂಡುಬಂದಿದೆ. ಆದರೆ ವಿಶೇಷ ಎಂಬಂತೆ ಮೇಲನಹಳ್ಳಿ ಗ್ರಾಮದ ಪೀಠದಲ್ಲಿ ಸರ್ಪ ಇರುವುದಿಲ್ಲ, ಪಾದದ ಪಕ್ಕದಲಿ ಒಬ್ಬ ವ್ಯಕ್ತಿಯ ಮುಂಡವು ಬೋರಲಾಗಿ ಬಿದ್ದಿದ್ದು ರುಂಡ ಇರುವುದಿಲ್ಲ. ಇನ್ನೊಂದು ಬದಿಯಲ್ಲಿ ಉಬ್ಬಿದ ಆಕೃತಿಯಿದ್ದು, ಪ್ರಾಣಿ ರುಂಡವಿರಬಹುದು. ಜೋಳದಾಳಿನ ಭೈರವ ಪೀಠಾದಲ್ಲಿ ಐದು ಸರ್ಪಗಳು ಕಂಡು ಬಂದಿದ್ದು ಮುಂಭಾಗದಲ್ಲಿ ಮೂರು, ಹಿಂಭಾಗದಲ್ಲಿ ಎರಡು ಸರ್ಪಗಳು ಮುಖ ಮಾಡಿವೆ.

ಭೈರವ ಪಾದ ಪೀಠದಲ್ಲಿ ಪ್ರಾಣಿಗಳು ಕಂಡುಬಂದಿವೆ ಚೌಳಹಿರಿಯುರು ಗ್ರಾಮದ ಪೀಠದಲ್ಲಿ ರುಂಡವಿಲ್ಲದ ಎರಡು ಪ್ರಾಣಿಗಳ ಶರೀರಗಳಿವೆ, ನಿರ್ದಿಷ್ಟವಾಗಿ ಇಂತಹದ್ದೇ ಎಂದು ಗುರುತಿಸಲು ಆಗುತ್ತಿಲ್ಲ. ಪ್ರಾಣಿ ರುಂಡಗಳಿಂದ ಇವುಗಳು ಕುರಿಯಿರಬಹುದು ಎಂದು ಗುರುತಿಸಬಹುದು. ಕಾರೇಹಳ್ಳಿ

ಗ್ರಾಮದಲ್ಲಿ ಈ ರೀತಿಯ ರಚನೆಯಿರುವ ಪ್ರಾಣಿಗಳ ರುಂಡ, ಮುಂಡಗಳನ್ನು ಕಾಣಬಹುದು. ಹಣ್ಣೆ ಗ್ರಾಮದ ಪೀಠದಲ್ಲಿ ಕುರಿಯ ರುಂಡಗಳು ಪೀಠದ ಎರಡೂ ಮೂಲೆಯಲ್ಲಿವೆ, ಶರೀರಗಳು ಕಂಡುಬರುವುದಿಲ್ಲ. ಲಿಂಗದಹಳ್ಳಿ ಗ್ರಾಮದ ಪೀಠದಲ್ಲಿ ಆಡಿನ ರುಂಡ ಹಾಗೂ ಆಮೆಯ ಮುಂಡಗಳಿವೆ. ಜೋಳದಾಳಿನ ಪಾದಪೀಠದಲ್ಲಿ ಆಡಿನ ಮುಂಡಗಳು ಹಿಂಭಾಗದಲ್ಲಿವೆ, ಅವುಗಳ ರುಂಡಗಳು ಮುಂಭಾಗದ ಎರಡೂ ಮೂಲೆಗಳಲ್ಲಿ ಕಂಡುಬಂದಿವೆ.

ಹಣ್ಣೆ, ಅಮೃತಾಪುರದ ಪೀಠಗಳಲ್ಲಿ ಮುಂಭಾಗದಲ್ಲಿ ಮೂರು ಹಿಂಭಾಗದಲ್ಲಿ ಮೂರು ಜನರಂತೆ ಆರು ಜನ ಮನುಷ್ಯರ ಮುಂಡಗಳು ಕುಳಿತಂತೆ ಕಂಡುಬಂದಿವೆ. ಬುಕ್ಕಾಂಬುಧಿ ಹಾಗೂ ಚೌಳಹಿರಿಯೂರು ಪೀಠದಲ್ಲಿ ಪ್ರತಿ ಮೂಲೆಗೊಬ್ಬರಂತೆ ನಾಲ್ಕು ಜನ ಕುಳಿತಿರುವ ಭಂಗಿಯಲ್ಲಿರುವ ರುಂಡವಿಲ್ಲದ ಶರೀರಗಳನ್ನು ಕಾಣಬಹುದು. ಆದರೆ ಇಟ್ಟಿಗೆ ಗ್ರಾಮದ ಭೈರವ ಪಾದವು ಕಲಾತ್ಮಕವಾಗಿದ್ದು ಪಾದುಕೆಗಳ ಪಕ್ಕದಲ್ಲಿ ಮನುಷ್ಯರಿಬ್ಬರ ಶರೀರವು ಅಂಗಾತವಾಗಿ ಮಲಗಿದಂತಿದೆ. ಇಬ್ಬರ ರುಂಡಗಳು ಪೀಠದ ಮೂಲೆಗಳಲ್ಲಿದೆ. ಪೀಠದ ದಿಕ್ಕಿಗೆ ಮೂರು ಜನರಂತೆ ನಾಲ್ಕು ದಿಕ್ಕಿಗೂ ಮನುಷ್ಯರು ನಿಂತಿರುವಂತಿದ್ದು, ಮಧ್ಯದಲ್ಲಿರುವವರು ಸ್ವಬಲಿಗೆ ಪ್ರಯತ್ನಿಸುವಂತಿದೆ. ಮುಂಭಾಗದಲ್ಲಿರುವ ಮೂವರಲ್ಲಿ ಎಡಗಡೆಯಲ್ಲಿರುವ ಮನುಷ್ಯನು ಸ್ವಬಲಿಯಾಗಿದ್ದಾನೆ ಅವನ ರುಂಡದಿಂದ ಬರುವ ರಕ್ತವನ್ನು ಪ್ರಾಣಿಯೊಂದು ನೆಕ್ಕುವಂತಿದೆ. ಆ ಪ್ರಾಣಿಯನ್ನು ನಾಯಿ ಎಂದು ಊಹಿಸಬಹುದು. ಜೋಳದಾಳಿನ ಪಾದಪೀಠದಲ್ಲಿ ಇಬ್ಬರು ವ್ಯಕ್ತಿಗಳು ಬೋರಲಾಗಿ ಮಲಗಿದ್ದಾರೆ. ಇವರ ರುಂಡಗಳು ಪೀಠದ ಮುಂಭಾಗದಲ್ಲಿವೆ. ಇಬ್ಬರು ವ್ಯಕ್ತಿಗಳು ಗಂಡಸರಾಗಿದ್ದಾರೆ. ಎಡಭಾಗದಲ್ಲಿರುವ ಮುಂಡದ ಕೈಯಲ್ಲಿ ಕತ್ತಿಯಿದ್ದು ಬಲಭಾಗದಲ್ಲಿರುವವನನ್ನು ಬಲಿನೀಡಿ ನಂತರ ತಾನೇ ಸ್ವಬಲಿಯಾಗಿರಬಹುದು. ರುಂಡಗಳು ಪೀಠದ ಮುಂಭಾಗದಲ್ಲಿವೆ. ಪೀಠದಲ್ಲಿ ಸ್ವಬಲಿಯು ಕಂಡುಬಂದಿದ್ದು, ಮುಂದೆ ಮತ್ತು ಹಿಂದೆ ಇಬ್ಬರು ವ್ಯಕ್ತಿಗಳು ತಮ್ಮ ರುಂಡವನ್ನು ಕತ್ತರಿಸಿಕೊಳ್ಳಲು ಪ್ರಯತ್ನಿಸಿದಂತಿದೆ. ಲಿಂಗದಹಳ್ಳಿ ಪೀಠದಲ್ಲಿ ಸರ್ಪವು ಮುಖ ಮಾಡಿರುವ ದಿಕ್ಕಿಗೆ ಮನುಷ್ಯನ ಮುಂಡವು ಬೋರಾಲಾದ ರೀತಿಯಲ್ಲಿದ್ದು ರುಂಡವಿರುವುದಿಲ್ಲ.

ಪಶುಬಲಿ ಹಾಗೂ ನರಬಲಿಗಳ ವ್ಯಕ್ತಿಗತವಾದ ಇನ್ನೊಂದು ಪ್ರಕಾರವೆಂದರೆ ಸ್ವಬಲಿ. ಈ ಪರಿಕಲ್ಪನೆಯು ಸ್ವಬಲಿ ಅಥವಾ ಆತ್ಮಹತ್ಯೆಯಿಂದ ಹಿಡಿದು ಸ್ವಅಂಗ ಹೀನತೆಯವರೆಗೆ ಹಾಗೂ ದೇಹದಂಡನೆಗಳಿಂದ ಹಿಡಿದು ಮಾನಸಿಕ ಶಿಸ್ತಿನ ಸಾದಾ ಅಭ್ಯಾಸಗಳವರೆಗೆ ವಿಸ್ತೃತ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ[14]. ಈ ರೀತಿಯ ಬಲಿಯ ಆಚರಿಸುತ್ತಿರುವುದನ್ನು ಇಟ್ಟಿಗೆ, ಜೋಳದಾಳ್ ಗ್ರಾಮಗಳ ಭೈರವ ಪೀಠಗಳಲ್ಲಿ ಕಾಣಬಹುದು. ಈ ಪೀಠದಲ್ಲಿ ಒಬ್ಬ ವ್ಯಕ್ತಿ ಸ್ವಬಲಿಗೆ ಪ್ರಯತ್ನಿಸುತ್ತಿದ್ದಾನೆ, ಮತ್ತೊಬ್ಬ ತನ್ನ ದೇಹದ ಅಂಗವನ್ನು ಕತ್ತರಿಸುತ್ತಿದ್ದು ಅಂಗ ಹೀನತೆಗೆ ಪ್ರಯತ್ನಿಸುತ್ತಿದ್ದಾನೆ.

**ಚರ್ಚೆಗಳು:** ಭೈರವ ಪಾದಪೀಠಗಳ ಅಧ್ಯಯನವು ನಮ್ಮಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಈ ಪಾದಪೀಠಗಳನ್ನು ಯಾವಾಗ ಸ್ಥಾಪಿಸಲಾಗಿದೆ? ಎಂಬುದಕ್ಕೆ ನಮ್ಮಲ್ಲಿ ಯಾವುದೇ ಪುರಾವೆಗಳಿಲ್ಲ. ಶಿಲ್ಪವನ್ನೇ ನೋಡಿ ಅದರ ಕಾಲವನ್ನು ಹೇಳುವುದು ಕಷ್ಟ. ಪಾದಪೀಠಗಳಲ್ಲಿ ಏಕರೂಪತೆ ಇಲ್ಲ. ಹಾವುಗಳ ಸಂಖ್ಯೆಯು ಒಂದರಿಂದ ಐದರವರೆಗೂ ಕಂಡುಬರುತ್ತದೆ. ಶಿಲ್ಪದಲ್ಲಿರುವ ಹಾವಿನ ಸಂಕೇತಿಕತೆ ಏನು? ಮತ್ತು ಅವುಗಳು ಸಂಖ್ಯೆ ಬದಲಾಗಿರುವುದಕ್ಕೆ ಕಾರಣವೇನು? ಕೆಲವು ಪೀಠಗಳಲ್ಲಿ ಪಾದಮುದ್ರೆಯಿದೆ ಕೆಲವು ಪೀಠಗಳಲ್ಲಿ ಪಾದುಕೆಗಳಿವೆ ಇವುಗಳ ಯಥಾರ್ಥವೇನು? ಸಾಮನ್ಯವಾಗಿ ಭೈರವ ಶಿಲ್ಪದಲ್ಲಿ ಕಂಡುಬರುವ ಭೈರವನು ಧರಿಸಿರುವ ವಿಶೇಷವಾದ ಪಾದುಕೆಗಳಿಗೂ ಇದಕ್ಕೂ ಸಂಬಂಧವಿದೇಯಾ? ಕೆಲವು ಸಂಧರ್ಭಗಳಲ್ಲಿ ನಾಲ್ಕು ಪಾದಗಳು ಅಂದರೆ ಎರಡು ಜೋಡಿ ಪಾದಗಳಿವೆ. ಸಿಂಗಟಗರೆ ಪಾದಪೀಠದಲ್ಲಿ ಒಂದು ಜೋತೆಯನ್ನು ದೊಡ್ಡದಾಗಿ ಇನ್ನೊಂದು ಜೋತೆಯನ್ನು ಚಿಕ್ಕದಾಗಿ ತೋರಿಸಲಾಗಿದೆ. ಅವುಗಳು ಭೈರವನ ಹೆಂಡತಿಯಾದ ಭೈರವಿಯನ್ನು ಪ್ರತಿನಿದಿಸುತ್ತವೆಯೇ? ಅರವತ್ನಾಲ್ಕು ಭೈರವರಲ್ಲಿ ಈ ಪಾದಪೀಠಗಳು ಯಾವ ಭೈರವನನು ಪ್ರತಿನಿಧಿಸುತ್ತವೆ? ಚಿಕ್ಕಮಗಳೂರು ಭಾಗದಲ್ಲಿ ಸಾ.ಶ 9ನೇ ಶತಮಾನದಿಂದ 13ನೇ ಶತಮಾನದ ನಡುವಿನ ಕಾಲಘಟ್ಟದಲ್ಲಿ ತಾಂತ್ರಿಕ ಆರಾಧನೆಯಾದ ಕಾಪಾಲಿಕ ಪಂಥವು ಅಂತಹ ಬಲವಾದ ಹಿಡಿತವನ್ನು ಹೊಂದಿತ್ತೇ? ಭೈರವ ಪಾದಪೀಠಗಳಲ್ಲಿ ಕಂಡುಬರುವಂತೆ ನರಬಲಿ ಸಮಾಜದಲ್ಲಿ ಪ್ರಚಲಿತದಲ್ಲಿತ್ತೇ? ಅಥವಾ ಸಾಂಕೇತಿಕವಾಗಿ ಇವುಗಳನ್ನು ಹಾಕಿಸಲಾಗುತ್ತಿತ್ತೇ? ಅಥವಾ ನರಬಲಿ ಪ್ರಚಲಿತದಲ್ಲಿದ್ದರೂ ಅದನ್ನು ಸಮಾಜ ಒಪ್ಪಿಕೊಂಡಿತ್ತೇ? ನಂತರದ ದಿನಗಳಲ್ಲಿ ಈ ಸಂಪ್ರದಾಯವು ಕಣ್ಮರೆಯಾಗಲು ಕಾರಣವೇನು? ಭಕ್ತಿ ಪಂಥದ ಉಗಮ ಮತ್ತು ವೀರಶೈವ ಧರ್ಮದ ಉಗಮ ಇದಕ್ಕೆ ಕಾರಣವೇ?

ಮೇಲಿನ ಅಧ್ಯಯನದಿಂದ ಪಾದಪೀಠಗಳು ಶೈವಧರ್ಮದ ಉಗ್ರರೂಪವಾದ ಭೈರವನನ್ನು ಆರಾಧಿಸುವ ಪಂಥಕ್ಕೆ ಸಂಬಂದಿಸಿದೆಂಬುದು ದೃಡವಾಗಿದ್ದು, ಸಾ.ಶ 9–14ನೇ ಶತಮಾನದ ಕಾಲಾವದಿಯಲ್ಲಿ ಕರ್ನಾಟಕದಲ್ಲಿ ಕಾಪಾಲಿಕರು ಪ್ರಚಲಿತದಲ್ಲಿದ್ದರೆಂದು ಹೇಳಬಹುದು. ಕಾಪಾಲಿಕರು ಆಚರಿಸುತ್ತಿದ್ದ ಬಲಿ ಸಂಪ್ರದಾಯದ ಸ್ಮಾರಕವಾಗಿ ಭೈರವ ಪಾದ ಪೀಠಗಳು ಕಂಡುಬಂದಿದ್ದು ನಿಜವಾದರೂ ನಂತರದ ಕಾಲದಲ್ಲಿ ಬಲಿ ಆಚರಣೆ ಮಾಡಲಾಗದ ಸಮುದಾಯದವರು ಇದನ್ನು ಸಾಂಕೇತಿಕವಾಗಿ ಹಾಕಿಸಿರುವುದನ್ನು ಅಲ್ಲಗಳೆಯುವಂತಿಲ್ಲ. ಭೈರವ ಪಾದ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಭೈರವ ಪಾದಗಳು ಕಾಪಾಲಿಕ ಪಂಥದವರ ಬಲಿ ಆಚರಣೆಯ ದ್ಯೋತಕಗಳಾಗಿವೆ. ಶಿವನನ್ನು ಆರಾದಿಸುವ ಪಂಥಗಳಲ್ಲಿ ಪ್ರಾಣಿ ಹಾಗೂ ನರಬಲಿಯನ್ನು ಕೊಡುವ ಪದ್ಧತಿ ಕಾಪಾಲಿಕರಲ್ಲಿ

ಮಾತ್ರ ಇತ್ತು. ಭೈರವ ಪಾದ ಪೀಠಗಳಲ್ಲಿ ಕಂಡುಬರುವ ಪ್ರಾಣಿಗಳ ಹಾಗೂ ಮಾನವರ ರುಂಡ ಮುಂಡಗಳು ಬಲಿ ಆಚರಣೆಯ ಸಾಂಕೇತಿಕಗಳಾಗಿವೆ.

ಬಲಿ ಹಿಂಸಾರೂಪವಾಗಿದ್ದು, ಕೊಲೆ ಎಂದು ಟೀಕಿಸುವ ರೂಪಗಳನ್ನು ಹೊಂದಿತ್ತು. ಬಲಿಯಂತಹ ಹೀನ ಕೃತ್ಯುವು ಜನರ ಮನಸ್ಸಿನಲ್ಲಿ ಭಯದ ವಾತಾವರಣ ಉಂಟು ಮಾಡುತ್ತಿತ್ತು. ಅದಕ್ಕಾಗಿ ಬಲಿ ಆಚರಣೆಯಿಂದ ದೂರವೇ ಉಳಿದರು ಎನ್ನಬಹುದು. ಪ್ರಾಣಿ ಬಲಿ ಮಾಡಲಾಗದ ಸಮುದಾಯಗಳು ಪ್ರತಿಕೃತಿಗಳ ಬಲಿಯನ್ನು ರೂಡಿಸಿಕೊಂಡವು.[15] ರಕ್ತ ಬಲಿಯ ರೂಪಾಂತರವಾಗಿ ಕುಂಕುಮ ಕಲಸಿದ ಅನ್ನವನ್ನು ದೇವಾಲಯದ ಬಲಿ ಪೀಠಗಳಲ್ಲಿಡುವುದು, ತೇರುಗಳಗಾಲಿಗೆ ಇಡುವುದು ನಂತರದಲ್ಲಿ ಬೆಳೆದು ಬಂದಿದೆ. ರಹಮತ್ ತರೀಕೆರೆಯವರು ಕರ್ನಾಟಕದ ಶಾಕ್ತ ಪಂಥದಲ್ಲಿ ತಿಳಿಸುವಂತೆ ಜೈನ ಪರಿಸರದಲ್ಲಿರುವ ಮುಖ್ಯವಾಗಿ ಶ್ರವಣಬೆಳಗೊಳದ ಆಸುಪಾಸಿನ ದೈವಗಳು ಜೀವಬಲಿಗೆ ಬದಲು ಹಿಟ್ಟಿನ ಪ್ರಾಣಿ ಬಲಿಗೊಡುವ ರೂಡಿ ಇರಿಸಿಕೊಂಡಿದೆ. ಈ ರೀತಿಯಾಗಿ ಭೈರವ ಪಾದ ಪೀಠಗಳು ಶೈವಪಂಥದಲ್ಲಿ ಬಲಿ ಆಚರಣೆಯ ಸ್ಮಾರಕವಾಗಿ ಕಂಡುಬಂದರೂ ನಂತರದ ದಿನಗಳಲ್ಲಿ ಬಲಿಯ ಪ್ರತಿಕೃತಿಗಳಾಗಿ ಹಾಕಿಸಿರಬಹುದಾಗಿದ್ದು, ಈ ಎಲ್ಲಾ ಅಂಶಗಳನ್ನು ದೃಡವಾಗಿ ಹೇಳಲು ಆಧಾರಗಳ ಕೊರತೆಯಿದ್ದು, ಇದರ ಬಗ್ಗೆ ಹೆಚ್ಚಿನ ಆಧ್ಯಯನದ ಅವಶ್ಯಕತೆಯಿದೆ.

**ಛಾಯಾಚಿತ್ರಗಳು**



**ಚಿತ್ರ–1, ಅಮೃತಾಪುರ**



**ಚಿತ್ರ–2, ಬುಕ್ಕಾಂಬುದಿ**



**ಚಿತ್ರ–3, ಚೌಳಹಿರಿಯೂರು**



**ಚಿತ್ರ–4, ದಾಸರಹಟ್ಟಿ**



**ಚಿತ್ರ–5, ಹಳೇಬೀಡು**



**ಚಿತ್ರ–6, ಹಣ್ಣೆ**



ಚಿತ್ರ–7, ಇಟ್ಟಿಗೆ ಮಲ್ಲೇಶ್ವರ



ಚಿತ್ರ–8, ಇಟ್ಟಿಗೆ ಮಲ್ಲೇಶ್ವರ



ಚಿತ್ರ–9, ಜೋಳದಾಳ್



ಚಿತ್ರ–10, ಕಲ್ಕೆರೆ



ಚಿತ್ರ–11, ಕದಿರೆಮಿದಿರೆ



ಚಿತ್ರ–12, ಕಾರೇಹಳ್ಳಿ



ಚಿತ್ರ–13, ಮೇಲನಹಳ್ಳಿ



ಚಿತ್ರ–14, ಸಿಂಗಟಗೆರೆ



ಚಿತ್ರ–15, ಯಳ್ಳಂಬಳಸೆ



ಚಿತ್ರ–16, ಲಿಂಗದಹಳ್ಳಿ



ಚಿತ್ರ–17, ಬೆಳವಾಡಿ



ಚಿತ್ರ–18, ಬೆಳವಾಡಿ

**ಅಡಿಟಿಪ್ಪಣಿಗಳು**

1 ಗಣೇಶ್. ಕೆ. ಆರ್.(ಪ್ರ.ಸಂ), ಗುಣಮಧುರ, ಪು–602.

2 ಚಿದಾನಂದಮೂರ್ತಿ. ಎಮ್., 2017, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು–153.

3 ಕಲಬುರ್ಗಿ.ಎಂ.ಎಂ., 2007, ಮಾರ್ಗ–4, ಪು–391.

4 ಚಿದಾನಂದಮೂರ್ತಿ. ಎಮ್., 2017, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು–168.

5 ಉಮಾಶಂಕರ್. ಎಂ. ಜಿ., 2010, ಮಲೆನಾಡು ಪ್ರದೇಶದ ಶೈವ ಧಾರ್ಮಿಕ ಕೇಂದ್ರಗಳು ಪು–119.

6 Gaurye, 1995, Indian Sadhus, P:116.

7 Ibid, P:142.

8 ಚಿದಾನಂದಮೂರ್ತಿ. ಎಮ್., 2017, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು:168–169.

9 ಮಂಜುನಾಥ್. ಸಿ.ಯು., 2012, ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ ಕ್ರಿ.ಶ.1150–1340, ಪು–19.

10 ವಿರೂಪಾಕ್ಷಕುಲಕರ್ಣಿ,2005,ಕಾಪಾಲಿಕರು ಮತ್ತು ಕಾಳಾಮುಖರು: ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು,ಪು–117.

11 ಉಮಾಶಂಕರ್.ಎಂ. ಜಿ., 2010, ಮಲೆನಾಡು ಪ್ರದೇಶದ ಶೈವ ಧಾರ್ಮಿಕ ಕೇಂದ್ರಗಳು ಪು–121.

12 ವಿರೂಪಾಕ್ಷ ಕುಲಕರ್ಣಿ,2005,ಕಾಪಾಲಿಕರು ಮತ್ತು ಕಾಳಾಮುಖರು: ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು,ಪು.117.

[13] Sarvamangala. G and Jagadish, "Bhairava's Feet" – A possible tantric cult connected with bhairava: p. no – 123.

[14] ವಿರೂಪಾಕ್ಷ ಕುಲಕರ್ಣಿ,2005,ಕಾಪಾಲಿಕರು ಮತ್ತು ಕಾಳಾಮುಖರು: ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು,ಪು.119.

[15] ರಹಮತ್ ತರೀಕೆರೆ,2017, ಕರ್ನಾಟಕದ ಶಾಕ್ತ ಪಂಥಗಳು, ಪು–127.

**ಆಕರಗ್ರಂಥಗಳು**


- ಉಮಾಶಂಕರ್. ಎಂ. ಜಿ., 2010, ಮಲೆನಾಡು ಪ್ರದೇಶದಲ್ಲಿನ ಶೈವ ಕೇಂದ್ರಗಳ ಒಂದು ಚಾರಿತ್ರಿಕ ಅಧ್ಯಯನ, ಶಂಕರಘಟ್ಟ: ಕುವೆಂಪು ವಿಶ್ವವುದ್ಯಾಲಯ (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ).
- ಕಲಬುರ್ಗಿ.ಎಂ.ಎಂ., 2010, ಮಾರ್ಗ–4, ಬೆಂಗಳೂರು: ಸ್ವಪ್ನ ಬುಕ್ ಹೌಸ್.
- ಗಣೇಶ್.ಕೆ.ಆರ್.(ಪ್ರ.ಸಂ),ಗುಣಮಧುರ, ಬೆಂಗಳೂರು: ದೇವರಕೊಂಡರೆಡ್ಡಿ ಅಭಿನಂದನ ಸಮಿತಿ.
- ಚಿದಾನಂದಮೂರ್ತಿ. ಎಂ., 2017, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು.
- ಮಂಜುನಾಥ್.ಸಿ.ಯು.,2012, ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ ಕ್ರಿ.ಶ.1150–1340, ಕುಪ್ಪಂ: ಚಿತ್ಕಲಾ ಪ್ರಕಾಶನ.
- ರಹಮತ್ ತರೀಕೆರೆ, 2017, ಕರ್ನಾಟಕ ಶಾಕ್ತಪಂಥ, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಪದ್ಮ. ಬಿ. ಎಸ್., 2013, ಹಾಸನ ಜಿಲ್ಲೆಯ ಭೈರವನ ಪಾದ ಶಿಲ್ಪಫಲಕಗಳು, ಇತಿಹಾಸ ದರ್ಶನ ಸಂ–28, ಪುಟ ಸಂಖ್ಯೆ 162–165,
- ವಿರೂಪಾಕ್ಷ ಕುಲಕರ್ಣಿ, 2005, ಕಾಪಾಲಿಕರು ಮತ್ತು ಕಾಳಾಮುಖರು: ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ.

- Gaurye G.S., 1995, *Indian Sadhus*, (Second Edition), Bombay: Bombay Prakashan,
- www.New World Encyclopaedia, Kapalikas and Kalamukhas, Accession date: 8th November 2019
- Sarvamangala. G and Jagadish, 2019, *"Bhairava's Feet" – A possible tantric cult connected with bhairava"*, Proceedings of Indian Art History congress 18th Session, 2019, Patiala. Page:117-12